# ದಾವಣಗೆರೆ ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ,
ದಾವಣಗೆರೆ–577007.

## ಸಿಂಡಿಕೇಟ್ ವಿಶೇಷ ಸಭೆಯ ನಡಾವಳಿಗಳು
## ದಿನಾಂಕ:11.03.2024
## (11ನೇ ವಾರ್ಷಿಕ ಘಟಿಕೋತ್ಸವ)

# ದಾವಣಗೆರೆ ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ-577007

ದೂರವಾಣಿ ಸಂಖ್ಯೆ: 08192-208029, ಫ್ಯಾಕ್ಸ್ ಸಂಖ್ಯೆ: 08192-208008


: ವಿದ್ಯಾದಾನೇನ ವರ್ಧತೆ, ವಿದ್ಯಾ ವಿನಯೇನ ಶೋಭತೆ, ವಿದ್ಯಯಾ ವಿಂಧತೆ ಅಮಅಮೃತಂ :

ಸಂಖ್ಯೆ:ದಾವಿವಿ/ಪ್ರಾಧಿಕಾರ/ಸಿಂ/228/2023-24/5095 ದಿನಾಂಕ:15.03.2024

ಇವರಿಗೆ,

ಮಾನ್ಯ ಸಿಂಡಿಕೇಟ್ ಸದಸ್ಯರುಗಳಿಗೆ.

ಮಾನ್ಯರೆ,

ವಿಷಯ : ದಿನಾಂಕ:11.03.2024 ರಂದು ಜರುಗಿದ ಸಿಂಡಿಕೇಟ್ ವಿಶೇಷ ಸಭೆಯ ನಡಾವಳಿಗಳು.

****

ವಿಶ್ವವಿದ್ಯಾನಿಲಯ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು ಅಧ್ಯಾಯ - III ರ ಪ್ರಕರಣ 16 (i) ರ ರೀತ್ಯ ದಿನಾಂಕ:11.03.2024 ರಂದು ಜರುಗಿದ ಸಿಂಡಿಕೇಟ್ ವಿಶೇಷ ಸಭೆಯ ನಡಾವಳಿಗಳನ್ನು ಈ ಮೂಲಕ ತಮಗೆ ಕಳುಹಿಸಲಾಗಿದೆ.

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ, 2000 ರಡಿ ರಚಿಸಲಾಗಿರುವ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು - ಅಧ್ಯಾಯ-III ರ ಪ್ರಕರಣ 16 (i) ರ ರೀತ್ಯ ನಡಾವಳಿ ತಲುಪಿದ **ಏಳು ದಿನಗಳೊಳಗಾಗಿ** ತಮ್ಮಿಂದ ನಡಾವಳಿಗಳ ದಾಖಲಾತಿಯ ಬಗ್ಗೆ ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ ನಡಾವಳಿಗಳ ದಾಖಲಾತಿಯು ಸರಿಯಾಗಿದೆಯೆಂದು ಭಾವಿಸಲಾಗುವುದು.

ತಮ್ಮ ವಿಶ್ವಾಸಿ,

15/3/2024

ಕುಲಸಚಿವರು

ದಾವಣಗೆರೆ ವಿಶ್ವವಿದ್ಯಾನಿಲಯ

ಶಿವಗಂಗೋತ್ರಿ, ದಾವಣಗೆರೆ-577007

**ಪ್ರತಿಗಳು:**

1. ಮಾನ್ಯ ರಾಜ್ಯಪಾಲರ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯಪಾಲರ ಸಚಿವಾಲಯ, ರಾಜಭವನ, ಬೆಂಗಳೂರು-560 001.
2. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು- 560 001.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯಗಳು), ಬಹುಮಹಡಿಗಳ ಕಟ್ಟಡ, ಬೆಂಗಳೂರು
4. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ನೃಪತುಂಗ ರಸ್ತೆ, ಬೆಂಗಳೂರು.
5. ಎಲ್ಲಾ ಸಿಂಡಿಕೇಟ್ ಸದಸ್ಯರುಗಳಿಗೆ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
6. ಕುಲಸಚಿವರು (ಪರೀಕ್ಷಾಂಗ), ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
7. ಹಣಕಾಸು ಅಧಿಕಾರಿಗಳು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
8. ನಿಕಾಯಗಳ ಡೀನರುಗಳು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
9. ಗ್ರಂಥಪಾಲಕರು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
10. ಕಾರ್ಯನಿರ್ವಾಹಕ ಇಂಜಿನಿಯರ್, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
11. ಉಪಕುಲಸಚಿವರು, ಶೈಕ್ಷಣಿಕ/ಮಾಸನಿ/ಅಭಿವೃದ್ಧಿ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
12. ನಿರ್ದೇಶಕರು, ಸಿ.ಡಿ.ಸಿ/ಐಕ್ಯೂಎಸಿ/ಪಿ.ಎಂ.ಇ./ದೈಹಿಕ ಶಿಕ್ಷಣ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
13. ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ, ದೃಶ್ಯಕಲಾ ಕಾಲೇಜು, ದಾವಣಗೆರೆ-577004
14. ಸಂಯೋಜನಾಧಿಕಾರಿಗಳು, ವಿಶ್ವವಿದ್ಯಾನಿಲಯ ಸ್ನಾತಕೋತ್ತರ ಕೇಂದ್ರ, ರಾ.ಹೆ.13, ಗುಡ್ಡದ ರಂಗವ್ವನಹಳ್ಳಿ, ಚಿತ್ರದುರ್ಗ-577502
15. ಸಂಯೋಜನಾಧಿಕಾರಿಗಳು, ವಿಶ್ವವಿದ್ಯಾನಿಲಯದ ಸರ್ಕಾರಿ ಪ್ರಥಮ ದರ್ಜೆ ಘಟಕ ಕಾಲೇಜು, ತುರುವನೂರು, ಚಿತ್ರದುರ್ಗ-577517
16. ಸಂಯೋಜನಾಧಿಕಾರಿಗಳು, ವಿಶ್ವವಿದ್ಯಾನಿಲಯದ ಸರ್ಕಾರಿ ಪ್ರಥಮ ದರ್ಜೆ ಘಟಕ ಕಾಲೇಜು, ಹರಿಯಬ್ಬೆ, ಚಿತ್ರದುರ್ಗ-577546
17. ಆಪ್ತ ಕಾರ್ಯಾಲಯ, ಮಾನ್ಯ ಕುಲಪತಿಗಳು/ಕುಲಸಚಿವರು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
18. ಕಛೇರಿ ಪ್ರತಿ.

# ದಾವಣಗೆರೆ ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ–577007

## ವಿಶ್ವವಿದ್ಯಾನಿಲಯದಲ್ಲಿ ದಿನಾಂಕ:11.03.2024 ರಂದು ಜರುಗಿದ ಸಿಂಡಿಕೇಟ್ ವಿಶೇಷ ಸಭೆಯ ನಡಾವಳಿಗಳು (11ನೇ ವಾರ್ಷಿಕ ಘಟಿಕೋತ್ಸವ)

**ಸಭೆಯಲ್ಲಿ ಹಾಜರಿದ್ದ ಸದಸ್ಯರು:**

1. ಪ್ರೊ. ಬಿ.ಡಿ ಕುಂಬಾರ., ಮಾನ್ಯ ಕುಲಪತಿಗಳು : ಅಧ್ಯಕ್ಷರು
2. ಶ್ರೀಮತಿ ಶಾರದಾ ಪಾಟೀಲ, ಮಾನ್ಯ ರಾಜ್ಯಪಾಲರಿಂದ ನಾಮನಿರ್ದೇಶಿತರು : ಸದಸ್ಯರು
3. ಡಾ. ನಾಗರಾಜ ಎಸ್. ಹೆಚ್., ಪ್ರಾಚಾರ್ಯರು : ಸದಸ್ಯರು
4. ಡಾ. ಲಿಂಗರಾಜ ಪೂಜಾರ್., ಪ್ರಾಚಾರ್ಯರು : ಸದಸ್ಯರು
5. ಡಾ. ದಿವಾಕರ್ ನಾಯ್ಕ ಕೆ. ಎಸ್., ಪ್ರಾಚಾರ್ಯರು : ಸದಸ್ಯರು
6. ಶ್ರೀಮತಿ ಜಯಲಕ್ಷ್ಮಿ ಎಂ. ಆರ್., ಪ್ರಾಚಾರ್ಯರು : ಸದಸ್ಯರು
7. ಡಾ. ಗೋವಿಂದಪ್ಪ ಎಂ., ಪ್ರಾಧ್ಯಾಪಕರು : ಸದಸ್ಯರು
8. ಡಾ. ರಮೇಶ್ ಸಿ. ಕೆ., ಕುಲಸಚಿವರು (ಪರೀಕ್ಷಾಂಗ). : ಸದಸ್ಯರು
9. ಡಾ. ವೆಂಕಟರಾವ್ ಎಂ. ಪಲಾಟೆ, ಕುಲಸಚಿವರು, ಆಡಳಿತ (ಪ್ರಭಾರೆ) : ಸದಸ್ಯ ಕಾರ್ಯದರ್ಶಿ ಹಾಗೂ ಡೀನರು, ಕಲಾ ನಿಕಾಯ

ನಿಯಮಾನುಸಾರ ಕನಿಷ್ಠ ಅಗತ್ಯ ಸಂಖ್ಯೆ 08 ಕ್ಕಿಂತ ಹೆಚ್ಚು ಅಂದರೆ 09 ಸದಸ್ಯರುಗಳು ಹಾಜರಿರುವುದನ್ನು ಖಚಿತಪಡಿಸಿಕೊಂಡು ನಿಗದಿತ ಸಮಯಕ್ಕೆ ಸರಿಯಾಗಿ ಸಭೆಯನ್ನು ಪ್ರಾರಂಭಿಸಲಾಯಿತು. ಮೊದಲನೆಯದಾಗಿ ಕುಲಸಚಿವರು ಮಾನ್ಯ ಕುಲಪತಿಗಳನ್ನು ಸಭೆಗೆ ಸ್ವಾಗತಿಸಿ ಅಧ್ಯಕ್ಷತೆಯನ್ನು ವಹಿಸುವಂತೆ ಕೋರಿದರು ಹಾಗೂ ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರುಗಳಿಗೆ ಸ್ವಾಗತವನ್ನು ಕೋರಿದರು. ತದನಂತರ, ಸಭೆಯ ಕಲಾಪಗಳನ್ನು ಈ ಮುಂದಿನಂತೆ ಪ್ರಾರಂಭಿಸಲಾಯಿತು.

ಕುಲಸಚಿವರು ಕುಲಪತಿಗಳು

| ಪರೀಕ್ಷಾಂಗ ವಿಭಾಗ | |
|---|---|
| ವಿಷಯ ಸಂಖ್ಯೆ: | 01(a)<br>(03/24) |

## –:ಟಿಪ್ಪಣಿ:–

ವಿಷಯ : ವಿಶ್ವವಿದ್ಯಾನಿಲಯದಲ್ಲಿ ದಿನಾಂಕ:**12.03.2024** ರಂದು ಏರ್ಪಡಿಸಲಾಗಿರುವ **11**ನೇ ವಾರ್ಷಿಕ ಘಟಿಕೋತ್ಸವದ ಸಮಾರಂಭದಲ್ಲಿ Ph.D/M.Phil/Gold Medal/Rank Certificate ಹಾಗೂ ಸ್ನಾತಕ ಮತ್ತು ಸ್ನಾತಕೋತ್ತರ ಪದವಿಗಳನ್ನು ಪ್ರದಾನ ಮಾಡುವ ಪ್ರಸ್ತವನೆಗೆ ಅನುಮೋದನೆ ನೀಡುವ ಬಗ್ಗೆ.

*****

ಘನತೆವೆತ್ತ ಕುಲಾಧಿಪತಿಗಳ ಅನುಮೋದನೆ ಮೇರೆಗೆ ದಿನಾಂಕ:12.03.2024ರಂದು ಏರ್ಪಡಿಸಲಾಗಿರುವ ವಿಶ್ವವಿದ್ಯಾನಿಲಯದ 11ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ವಿವಿಧ ವಿಷಯಗಳಲ್ಲಿ – Ph.D/M.Phil/Gold Medal/ Rank Certificate ಹಾಗೂ ವಿವಿಧ ಸ್ನಾತಕ ಮತ್ತು ಸ್ನಾತಕೋತ್ತರ ಪದವಿಗಳಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣ ಪತ್ರಗಳನ್ನು ಪ್ರದಾನ ಮಾಡುವ ಸಲುವಾಗಿ – ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ–2000, ಸೆಕ್ಷನ್ 29(2)(S) ಹಾಗೂ ಘಟಿಕೋತ್ಸವ ಪರಿನಿಯಮಗಳನುಸಾರ ವಿವಿಧ ನಿಕಾಯವಾರು ಅಭ್ಯರ್ಥಿಗಳ ಪಟ್ಟಿಯನ್ನು ಸಿದ್ಧಪಡಿಸಿ, ದಿನಾಂಕ:11.03.2024ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ವಿಶೇಷ ಸಭೆಯ ಅವಗಾಹನೆಗೆ, ಪರಿಶೀಲನೆಗೆ ಹಾಗೂ ಅಂಗೀಕಾರಕ್ಕಾಗಿ ಸಲ್ಲಿಸಿದೆ.

### ನಿರ್ಣಯ

**11ನೇ ವಾರ್ಷಿಕ ಘಟಿಕೋತ್ಸವ**
**2022–23ನೇ ಸಾಲಿನಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳ ವಿವರಣಾ ಪಟ್ಟಿ**

| ಕ್ರ. ಸಂ. | ವಿವರ | ಗಂಡು | ಹೆಣ್ಣು | ಒಟ್ಟು ವಿದ್ಯಾರ್ಥಿಗಳು | ಒಟ್ಟು ಸ್ವರ್ಣ ಪದಕಗಳು |
|---|---|---|---|---|---|
| 01 | ಸ್ನಾತಕ ಪದವಿಯಲ್ಲಿ ಸ್ವರ್ಣ ಪದಕ ಪಡೆದ ವಿದ್ಯಾರ್ಥಿಗಳು | 02 | 10 | 12 | 20 |
| | ಸ್ನಾತಕೋತ್ತರ ಪದವಿಯಲ್ಲಿ ಸ್ವರ್ಣ ಪದಕ ಪಡೆದ ವಿದ್ಯಾರ್ಥಿಗಳು | 04 | 29 | 33 | 59 |
| | ಒಟ್ಟು ವಿದ್ಯಾರ್ಥಿಗಳ ಸಂಖ್ಯೆ: | **06** | **39** | **45** | **79** |
| 02 | ಪ್ರಥಮ ರ್‍ಯಾಂಕ್ ಪಡೆದ ವಿದ್ಯಾರ್ಥಿಗಳು | ಸ್ನಾತಕ ಪದವಿ | ಸ್ನಾತಕೋತ್ತರ ಪದವಿ | ಒಟ್ಟು ಪ್ರಥಮ ರ್‍ಯಾಂಕ್ ಪಡೆದ ವಿದ್ಯಾರ್ಥಿಗಳು | |
| | | 09 | 30 | 39 | |

ಪು.ತಿ.ನೋ..

ಕುಲಸಚಿವರು                ಕುಲಪತಿಗಳು

| | | | | |
|---|---|---|---|---|
| 03 | ಎರಡರಿಂದ ಮೂರು ರ್‍ಯಾಂಕ್ ಪಡೆದ ವಿದ್ಯಾರ್ಥಿಗಳು | ಸ್ನಾತಕ ಪದವಿ | ಸ್ನಾತಕೋತ್ತರ ಪದವಿ | ಒಟ್ಟು ಎರಡರಿಂದ ಮೂರು ರ್‍ಯಾಂಕ್ ಪಡೆದ ವಿದ್ಯಾರ್ಥಿಗಳು |
| | | 20 | 51 | **71** |
| 04 | ಪಿಹೆಚ್.ಡಿ | ಗಂಡು | ಹೆಣ್ಣು | ಒಟ್ಟು ವಿದ್ಯಾರ್ಥಿಗಳು |
| | | 32 | 32 | **64** |
| 05 | ಸ್ನಾತಕ ಪದವಿ | 4,977 | 7,288 | **12,265** |
| | ಸ್ನಾತಕೋತ್ತರ ಪದವಿ | 778 | 1,314 | **2,092** |
| 06 | ಒಟ್ಟು ಸ್ನಾತಕ ಮತ್ತು ಸ್ನಾತಕೋತ್ತರ ಪದವಿ | ಸ್ನಾತಕ | ಸ್ನಾತಕೋತ್ತರ | ಒಟ್ಟು |
| | | **12,265** | **2,092** | **14,357** |
| 07 | ಒಟ್ಟು ವಿದ್ಯಾರ್ಥಿಗಳ ಶೇಕಡವಾರು ಫಲಿತಾಂಶ | ಸ್ನಾತಕ | ಸ್ನಾತಕೋತ್ತರ | |
| | | **75.99%** | **96.09%** | |

ವಿಶ್ವವಿದ್ಯಾನಿಲಯದ 11ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ವಿವಿಧ ವಿಷಯಗಳಲ್ಲಿ – Ph.D/M.Phil/Gold Medal/Rank Certificate ಹಾಗೂ ವಿವಿಧ ಸ್ನಾತಕ ಮತ್ತು ಸ್ನಾತಕೋತ್ತರ ಪದವಿಗಳಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣ ಪತ್ರಗಳನ್ನು ಪ್ರದಾನ ಮಾಡುವ ಸಲುವಾಗಿ ಈ ಮೇಲ್ಕಂಡ ಪ್ರಸ್ತಾವನೆಗೆ ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು

| ಪರೀಕ್ಷಾಂಗ ವಿಭಾಗ | |
|---|---|
| ವಿಷಯ ಸಂಖ್ಯೆ: | 01(b)<br>(03/24) |

## –:ಟಿಪ್ಪಣಿ:–

**ವಿಷಯ: ವಿಶ್ವವಿದ್ಯಾನಿಲಯದ 11ನೇ ವಾರ್ಷಿಕ ಘಟಿಕೋತ್ಸವದಲ್ಲಿ ಗೌರವ ಡಾಕ್ಟರೇಟ್ ಪದವಿ ಪ್ರಶಸ್ತಿಗೆ ನಾಮ ನಿರ್ದೇಶನ ಮಾಡುವ ಕುರಿತು.**

****

ವಿಶ್ವವಿದ್ಯಾನಿಲಯದ 11ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದದಲ್ಲಿ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡುವ ಸಂಬಂಧ ವಿಶ್ವವಿದ್ಯಾನಿಲಯಕ್ಕೆ ಸ್ವೀಕೃತಗೊಂಡ 06 (CV) ಮನವಿಗಳನ್ನು ಘನತೆವೆತ್ತ ಮಾನ್ಯ ರಾಜ್ಯಪಾಲರಿಗೆ ಕಳುಹಿಸಲು ದಿನಾಂಕ:.29.02.2024ರಂದು ಏರ್ಪಡಿಸಲಾಗಿದ್ದ ಸಿಂಡಿಕೇಟ್ ಸಾಮಾನ್ಯ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿತ್ತು.

ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಘನತೆವೆತ್ತ ಮಾನ್ಯ ರಾಜ್ಯಪಾಲರು ಈ ಕೆಳಕಂಡ ಗಣ್ಯರುಗಳಿಗೆ 11ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ಗೌರವ ಡಾಕ್ಟರೇಟ್ ಪದವಿಗಳನ್ನು ಪ್ರದಾನ ಮಾಡಲು ಅನುಮೋದನೆ ನೀಡಿರುತ್ತಾರೆ.

**10ನೇ ವಾರ್ಷಿಕ ಘಟಿಕೋತ್ಸವದ ಗೌರವ ಡಾಕ್ಟರೇಟ್ ಪದವಿ ವಿವರ**

| ಕ್ರ. ಸಂ. | ಹೆಸರು | ಸಾಧನೆ ಕ್ಷೇತ್ರದ ಮಾಹಿತಿ | ವಿಳಾಸ |
|---|---|---|---|
| 1. | ಶ್ರೀ ಶಿವರಾಜ್ ವಿ. ಪಾಟೀಲ್ | ಕಾನೂನು | ವಿಶ್ರಾಂತ ನ್ಯಾಯಮೂರ್ತಿಗಳು, ಸುಪ್ರೀಂ ಕೋರ್ಟ್, #254, ಸ್ವರ್ಶ್, 18ನೇ ಕ್ರಾಸ್, ಸದಾಶಿವ ನಗರ, ಬೆಂಗಳೂರು – 560080 |
| 2. | ಪ್ರೊ॥ ಕೆ. ಸಿದ್ದಪ್ಪ | ವಿಜ್ಞಾನ ಮತ್ತು ತಂತ್ರಜ್ಞಾನ | #442 ಬಿ, ನಮನ, 2ನೇ ಕ್ರಾಸ್, ಐಡಿಯಲ್ ಹೋಮ್ಸ್, ರಾಜರಾಜೇಶ್ವರಿ ನಗರ, ಬೆಂಗಳೂರು–560098. |
| 3. | ಶ್ರೀ ಹೆಚ್.ಬಿ. ಮಂಜುನಾಥ | ಸಾಹಿತ್ಯ ಕ್ಷೇತ್ರ | ನಂ. 331, ದೀಕ್ಷಿತ್ ರಸ್ತೆ, ಕೆ.ಬಿ. ಬಡಾವಣೆ, ದಾವಣಗೆರೆ – 577 002 |

ಸದರಿ ವಿಷಯವನ್ನು ದಿನಾಂಕ: 11.03.2024 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ವಿಶೇಷ ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

### ನಿರ್ಣಯ

ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಘನತೆವೆತ್ತ ಮಾನ್ಯ ರಾಜ್ಯಪಾಲರು ಈ ಮೇಲ್ಕಂಡ ಗಣ್ಯರುಗಳಿಗೆ 11ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ಗೌರವ ಡಾಕ್ಟರೇಟ್ ಪದವಿಗಳನ್ನು ಪ್ರದಾನ ಮಾಡಲು ಅನುಮೋದನೆ ನೀಡಿರುವುದನ್ನು ಸಭೆಯು ಒಮ್ಮತದಿಂದ ಒಪ್ಪಿಗೆ ಸೂಚಿಸಿತು.

ಕುಲಸಚಿವರು

ಕುಲಪತಿಗಳು

| ಐ.ಕ್ಯೂ.ಎ.ಸಿ ವಿಭಾಗ | |
|---|---|
| ವಿಷಯ ಸಂಖ್ಯೆ: | 02(a) (03/24) |

## -:ಟಿಪ್ಪಣಿ:-

ವಿಷಯ: ಯು.ಜಿ.ಸಿ. 2018ರ ಸಿ.ಎ.ಎಸ್. ನಿಯಮಾವಳಿಯಂತೆ ಸಹ ಪ್ರಾಧ್ಯಾಪಕರಿಂದ ಪ್ರಾಧ್ಯಾಪಕರಿಗೆ ಮತ್ತು ಪ್ರಾಧ್ಯಾಪಕರಿಂದ ಹಿರಿಯ ಪ್ರಾಧ್ಯಾಪಕರಿಗೆ ವೃತ್ತಿ ಪದೋನ್ನತಿ ನೀಡುವ ಕುರಿತು.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸಹ ಪ್ರಾಧ್ಯಾಪಕರಿಂದ ಪ್ರಾಧ್ಯಾಪಕರು (Academic level 13A to Academic Level 14) ಮತ್ತು ಪ್ರಾಧ್ಯಾಪಕರಿಂದ ಹಿರಿಯ ಪ್ರಾಧ್ಯಾಪಕರಿಗೆ (Academic level 14 to Academic Level 15) ವೃತ್ತಿ ಪದೋನ್ನತಿ ನೀಡಲು ಅರ್ಜಿಗಳನ್ನು ಯು.ಜಿ.ಸಿ 2018ರ ನಿಯಮಾವಳಿಯಂತೆ ಆಹ್ವಾನಿಸಿದ್ದು, ಅರ್ಜಿಗಳನ್ನು ಪರಿಶೀಲಿಸಿ ಮೌಲ್ಯಮಾಪನ ನಡೆಸಿ ಎ.ಜಿ.ಪಿ ಮಂಜೂರಾತಿ ಮಾಡಲು ಬಾಹ್ಯ ವಿಷಯ ತಜ್ಞರುಗಳು ದಿನಾಂಕ:06.3.2024 ಮತ್ತು ದಿನಾಂಕ:07.03.2024ರಂದು ಮೌಲ್ಯಮಾಪನ ಮತ್ತು ಸಂದರ್ಶನ ನಡೆಸಿ ವರದಿ ನೀಡಿರುತ್ತಾರೆ. ಆದ್ದರಿಂದ, ಪ್ರಾಧ್ಯಾಪಕರಿಂದ ಹಿರಿಯ ಪ್ರಾಧ್ಯಾಪಕರಿಗೆ ಹಾಗೂ ಸಹ ಪ್ರಾಧ್ಯಾಪಕರಿಂದ ಪ್ರಾಧ್ಯಾಪಕರುಗಳಿಗೆ (ಒಟ್ಟು:25) ವೃತ್ತಿ ಪದೋನ್ನತಿ ನೀಡುವ ಕುರಿತು ದಿನಾಂಕ:11.03.2024ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ವಿಶೇಷ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆ ಮಂಡಿಸಲಾಗಿದೆ.

### ನಿರ್ಣಯ

**List of CAS Promotions from Professor to Senior Professor –March 2024**

| Sl. No | Name of the candidate | Name of the Department | Date of Eligibility |
|---|---|---|---|
| 1 | Prof Gayathri Devaraja | Microbiology | 29-08-2022 |
| 2 | Prof Ramalingappa | | 03-08-2023 |
| 3 | Prof Rangappa KB | Economics | 18-09-2023 |
| 4 | Prof V. Kumar | Biochemistry | 04-06-2023 |
| 5 | Prof Laxmana P. | Commerce | 19-08-2023 |
| 6 | Prof Raju J.K | MBA | 01-01-2019 |
| 7 | Prof Mamatha GP | Chemistry | 15-11-2020 |

**List of CAS Promotions from Associate Professor to Professor - March 2024**

| Sl. No | Name of the candidate | Name of the Department | Date of Eligibility |
|---|---|---|---|
| 1 | Dr Pramod S N | Food Technology | 16-01-2023 |
| 2 | Dr Sharath R | | 21-08-2022 |
| 3 | Dr Shankar J | | 20-08-2022 |
| 4 | Dr Paramesha M | | 28-06-2023 |
| 5 | Dr Seema J. Patel | Biotechnology | 13-02-2024 |
| 6 | Dr Huchhe Gowda | Economics | 19-07-2022 |
| 7 | Dr Selvi R. | | 27-11-2023 |
| 8 | Dr Joginakatte Manjunatha | Kannada | 06-12-2022 |

ಪು.ತಿ.ನೋ.

ಕುಲಸಚಿವರು

ಕುಲಪತಿಗಳು

| | | | |
|---|---|---|---|
| 9 | Dr Basavanna M | Computer Science | 21-11-2023 |
| 10 | Dr Chandrakath Naikodi | | 02-12-2022 |
| 11 | Dr Sathyanarayana | Commerce | 27-03-2023 |
| 12 | Dr Supriya R | | 22-05-2023 |
| 13 | Dr Cirappa I. B | | 15-09-2023 |
| 14 | Dr B.P Nadeshwarappa | Chemistry | 14-06-2023 |
| 15 | Dr Lokesh M.U | MSW | 25-06-2022 |
| 16 | Dr B.P Shivalingappa | | 19-05-2023 |
| 17 | Dr Shivakumar Kanasogi | Journalism | 24-02-2023 |
| 18 | Dr. Venkatesha K | Education | 06-03-2024 |

ವಿಶ್ವವಿದ್ಯಾನಿಲಯದ ಸಹ ಪ್ರಾಧ್ಯಾಪಕ ಹಾಗೂ ಪ್ರಾಧ್ಯಾಪಕರುಗಳ ವೃತ್ತಿ ಪದೋನ್ನತಿಯ ಅರ್ಜಿಗಳನ್ನು ಯು.ಜಿ.ಸಿ – 2018ರ ನಿಯಮಾವಳಿಗಳು ಮತ್ತು ಘನತೆವೆತ್ತ ಮಾನ್ಯ ರಾಜ್ಯಪಾಲರಿಂದ ಅನುಮೋದನೆಗೊಂಡ ವಿಶ್ವವಿದ್ಯಾನಿಲಯದ ಪರಿನಿಯಮಗಳನುಸಾರ ಸಿ.ಎ.ಎಸ್. ನಿಯಮದಡಿ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರಿಂದ ಹಿರಿಯ ಪ್ರಾಧ್ಯಾಪಕರು ಹಾಗೂ ಸಹ ಪ್ರಾಧ್ಯಾಪಕರಿಂದ ಪ್ರಾಧ್ಯಾಪಕರ ಅರ್ಜಿಗಳ ಪರಿಶೀಲನೆ ಮತ್ತು ಮೌಲ್ಯಮಾಪನ ಮಾಡಲು ವಿವಿಧ ವಿಶ್ವವಿದ್ಯಾನಿಲಯಗಳ ಬಾಹ್ಯ ವಿಷಯ ತಜ್ಞರುಗಳು ಮೌಲ್ಯಮಾಪನ ಮತ್ತು ಸಂದರ್ಶನ ನಡೆಸಿದ ವರದಿಯ ಕುರಿತು ಸುಧೀರ್ಘವಾಗಿ ಚರ್ಚಿಸಿ ಮೇಲ್ಕಂಡ ಅಧ್ಯಾಪಕರುಗಳಿಗೆ ಅರ್ಹತಾ ದಿನಾಂಕದಿಂದ ಹಿರಿಯ ಪ್ರಾಧ್ಯಾಪಕ ಮತ್ತು ಪ್ರಾಧ್ಯಾಪಕ ಹುದ್ದೆಗೆ ವತ್ತಿ ಪದೋನ್ನತಿ ನೀಡಲು ನಿರ್ಣಯಿಸಿ, ಆರ್ಥಿಕ ಸೌಲಭ್ಯವನ್ನು ಸಿಂಡಿಕೇಟ್ ಸಭೆಯ ದಿನಾಂಕದಿಂದ ಪಾವತಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಅಭಿವೃದ್ಧಿ ವಿಭಾಗ | |
|---|---|
| ವಿಷಯ ಸಂಖ್ಯೆ: | 03(a)<br>(03/24) |

## -:ಟಿಪ್ಪಣಿ:-

ವಿಷಯ : **2024-25ನೇ ಸಾಲಿಗೆ ವಿಶ್ವವಿದ್ಯಾನಿಲಯದಲ್ಲಿ ಟೆಂಡರ್ ಕರೆದು ಅಂತಿಮಗೊಳಿಸಿರುವ ಸಂಸ್ಥೆಯವರ ಅನುಮೋದನೆ ಕುರಿತು.**

*****

ದಾವಣಗೆರೆ ವಿಶ್ವವಿದ್ಯಾನಿಲಯಕ್ಕೆ ಬೇಕಾಗಿರುವ ವಿವಿಧ ಸೇವೆಗಳನ್ನು ಪಡೆಯಲು ಮತ್ತು ವಸ್ತುಗಳನ್ನು 2024-25ನೇ ಸಾಲಿಗೆ ಖರೀದಿಸಲು ಟೆಂಡರ್ ಕರೆಯಲಾಗಿತ್ತು. ಟೆಂಡರ್‌ನಲ್ಲಿ ಭಾಗವಹಿಸಿದ ಸಂಸ್ಥೆಯವರ ತಾಂತ್ರಿಕ್ ಬಿಡ್ ಮತ್ತು ಹಣಕಾಸು ಬಿಡ್ ತೆರೆಯಲು ಸಮಿತಿ ರಚಿಸಲಾಗಿರುತ್ತದೆ ಮಾನ್ಯ ಕುಲಪತಿಯವರ ಅಧ್ಯಕ್ಷತೆಯಲ್ಲಿ ಅಂತಿಮಗೊಳಿಸಿರುವ ಈ ಕೆಳಕಂಡ ಸಂಸ್ಥೆಯವರ ಅನುಮೋದನೆ ಪಡೆದು ಕರಾರು ಮಾಡಿಕೊಳ್ಳಬೇಕಾಗಿರುವುದರಿಂದ ಈ ಕೆಳಕಂಡ ಸಂಸ್ಥೆಗಳ ಅನುಮೋದನೆ ಮಂಡಿಸಿದೆ.

| ಕ್ರ.ಸಂ | ವಿಷಯ | ಆಯ್ಕೆ ಮಾಡಲಾದ ಸಂಸ್ಥೆ ಹೆಸರು |
|---|---|---|
| 01 | ಮಾನವ ಸಂಪನ್ಮೂಲ ಸೇವೆ ಪಡೆಯುವ ಬಗ್ಗೆ | M/S BKR Services Private Limited |
| 02 | ಲೇಖನಾ ಮತ್ತು ಸ್ವಚ್ಛತಾ ಸಾಮಗ್ರಿ ಖರೀದಿ | M/S S. J. Enterprises |
| 03 | ಕ್ರೀಡಾ ಸಾಮಗ್ರಿಗಳ ಖರೀದಿ | M/S Tirumala Enterprises |
| 04 | ಆರೋಗ್ಯ ಕೇಂದ್ರಕ್ಕೆ ಔಷಧ/ಚುಚ್ಚುಮದ್ದು ಖರೀದಿ | M/S Apollo Plus Medicals And General Store |

ದಿನಾಂಕ:11.03.2024ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ವಿಶೇಷ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

### ನಿರ್ಣಯ

2024-25ನೇ ಸಾಲಿಗೆ ಖರೀದಿಸಲು ಟೆಂಡರ್ ಕರೆಯಲಾಗಿತ್ತು, ಟೆಂಡರ್‌ನಲ್ಲಿ ಭಾಗವಹಿಸಿದ ಸಂಸ್ಥೆಯವರ ತಾಂತ್ರಿಕ್ ಬಿಡ್ ಮತ್ತು ಹಣಕಾಸು ಬಿಡ್ ತೆರೆಯಲು ಸಮಿತಿ ರಚಿಸಲಾಗಿದ್ದು, ಸದರಿ ಟೆಂಡರ್‌ನಲ್ಲಿ ಯಶಸ್ವಿಯಾದ ಮೇಲ್ಕಂಡ ಕ್ರಮ ಸಂಖ್ಯೆ 01 ರಿಂದ 03ರವರೆಗಿನ ಸಂಸ್ಥೆಗಳೊಂದಿಗೆ ಕರಾರು ಒಪ್ಪಂದ ಮಾಡಿಕೊಳ್ಳಲು ಹಾಗೂ ಕ್ರಮ ಸಂಖ್ಯೆ 04ರ ವಿಷಯಕ್ಕೆ ಪುನಃ ಟೆಂಡರ್ ಕರೆಯಲು ಸಭೆಯು ಒಮ್ಮತದಿಂದ ಅನುಮೋದಿಸಿತು ಹಾಗೂ ಮುಂದಿನ ಕ್ರಮಕ್ಕಾಗಿ ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಿತು.

ಕುಲಸಚಿವರು

ಕುಲಪತಿಗಳು

| ಅಧ್ಯಯನ ಮಂಡಳಿ ವಿಭಾಗ | |
|---|---|
| ವಿಷಯ ಸಂಖ್ಯೆ: | 04(a)<br>(03/24) |

# -:ಟಿಪ್ಪಣಿ:-

**ವಿಷಯಃ ಸ್ನಾತಕ ಪದವಿಯ 6ನೇ ಸೆಮಿಸ್ಟರ್‌ನಲ್ಲಿ ಇಂಟರ್ನ್‌ಶಿಪ್ ಬದಲಾಗಿ "ಕಲಿಕೆ ಜೊತೆಗೆ ಕೌಶಲ್ಯ" ವಿಷಯವನ್ನು ಪರಿಚಲಿಸುವ ಕುರಿತು.**

*****

ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ ನಿರ್ದೇಶಾನುಸಾರ ಕರ್ನಾಟಕ ಸರ್ಕಾರ ಕೌಶಾಲ್ಯಾಭಿವೃದ್ಧಿ ಇಲಾಖೆ ಹಾಗೂ ಉನ್ನತ ಶಿಕ್ಷಣ ಇಲಾಖೆಯ ಸಹಯೋಗದೊಂದಿಗೆ ಸ್ನಾತಕ ಪದವಿಯ 6ನೇ ಸೆಮಿಸ್ಟರ್‌ನಲ್ಲಿ Internship/Project work/field Experience ಬದಲಾಗಿ 'ಕಲಿಕೆ ಜೊತೆಗೆ ಕೌಶಲ್ಯ' ವಿಷಯವನ್ನು ಪರಿಚಲಿಸಲು ತಿಳಿಸಿರುತ್ತಾರೆ.

ಅದರಂತೆ, ದಿನಾಂಕಃ 08.02.2024ರ ವಿಶ್ವವಿದ್ಯಾನಿಲಯದ ಡೀನರುಗಳ ಸಭೆಯಲ್ಲಿ ಅನುಮೋದನೆ ಪಡೆದು ವಿಶ್ವವಿದ್ಯಾನಿಲಯದ ಸಂಲಗ್ನಗೊಂಡ ಸ್ನಾತಕ ಕಾಲೇಜುಗಳಿಗೆ Internship/Project work/field Experience ವಿಷಯದ ಕುರಿತು ಯಾವುದೇ ರೀತಿಯ ಪೂರ್ವ ತಯಾರಿ ಕ್ರಮಗಳನ್ನು ವಹಿಸದಂತೆ ಸುತ್ತೋಲೆ ಹೊರಡಿಸಲಾಗಿತ್ತು.

ಈಗ ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ ನಿರ್ದೇಶಾನುಸಾರ ಕರ್ನಾಟಕ ಸರ್ಕಾರ ಕೌಶಾಲ್ಯಾಭಿವೃದ್ಧಿ ಇಲಾಖೆ ಹಾಗೂ ಉನ್ನತ ಶಿಕ್ಷಣ ಇಲಾಖೆಯವರು 'ಕಲಿಕೆ ಜೊತೆಗೆ ಕೌಶಲ್ಯ' ವಿಷಯದ ಪಠ್ಯಕ್ರಮವನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿರುತ್ತಾರೆ. ಆದ್ದರಿಂದ, ಸದರಿ ಪಠ್ಯಕ್ರಮವನ್ನು ಅಧ್ಯಯನ ಮಂಡಳಿಗಳ ಅನುಮೋದನೆ ಪಡೆದು ವಿಶ್ವವಿದ್ಯಾನಿಲಯದ ಸಂಲಗ್ನಗೊಂಡ ಸ್ನಾತಕ ಕಾಲೇಜುಗಳಲ್ಲಿ ಅನುಷ್ಠಾನಗೊಳಿಸಲು ಸದರಿ ವಿಷಯವನ್ನು ದಿನಾಂಕ:11.03.2024ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ವಿಶೇಷ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

## ನಿರ್ಣಯ

ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ ನಿರ್ದೇಶಾನುಸಾರ ಕರ್ನಾಟಕ ಸರ್ಕಾರ ಕೌಶಾಲ್ಯಾಭಿವೃದ್ಧಿ ಇಲಾಖೆ ಹಾಗೂ ಉನ್ನತ ಶಿಕ್ಷಣ ಇಲಾಖೆಯವರು 'ಕಲಿಕೆ ಜೊತೆಗೆ ಕೌಶಲ್ಯ' ವಿಷಯದ ಪಠ್ಯಕ್ರಮವನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿರುತ್ತಾರೆ. ಆದ್ದರಿಂದ, 6ನೇ ಸೆಮಿಸ್ಟರ್‌ನಲ್ಲಿ Internship/Project work/field Experience ಬದಲಾಗಿ ಸದರಿ ವಿಷಯದ ಪಠ್ಯಕ್ರಮವನ್ನು ಅಧ್ಯಯನ ಮಂಡಳಿಗಳ ಅನುಮೋದನೆ ಪಡೆದು ವಿಶ್ವವಿದ್ಯಾನಿಲಯದ ಸಂಲಗ್ನಗೊಂಡ ಸ್ನಾತಕ ಕಾಲೇಜುಗಳಲ್ಲಿ ಅನುಷ್ಠಾನಗೊಳಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಹಣಕಾಸು ವಿಭಾಗ | |
|---|---|
| ವಿಷಯ ಸಂಖ್ಯೆ: | 05(a)<br>(03/24) |

## –ಃಟಿಪ್ಪಣಿಃ–

**ವಿಷಯಃ ವಿಶ್ವವಿದ್ಯಾನಿಲಯದ 2024–25ನೇ ಸಾಲಿನ ಅಂದಾಜು ಆಯವ್ಯಯ ಅನುಮೋದನೆ ಕುರಿತು.**

*****

ವಿಶ್ವವಿದ್ಯಾನಿಲಯದ 2024–25ನೇ ಸಾಲಿನ ಅಂದಾಜು ಆಯವ್ಯಯವನ್ನು ಸಿದ್ದಪಡಿಸಲಾಗಿದ್ದು, ಕರುಡು ಪ್ರತಿಯನ್ನು ಅನುಮೋದನೆಗಾಗಿ ದಿನಾಂಕ:11.03.2024ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ವಿಶೇಷ ಸಭೆಯ ಅವಗಾಹನೆಗೆ, ಪರಿಶೀಲನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

## ನಿರ್ಣಯ

ವಿಶ್ವವಿದ್ಯಾನಿಲಯದ 2024–25ನೇ ಸಾಲಿನ ಅಂದಾಜು ಆಯವ್ಯಯದ ಕರಡು ಪ್ರತಿಯನ್ನು ಪರಿಶೀಲಿಸಿ, ಸುದೀರ್ಘ ಚರ್ಚೆಯ ನಂತರ ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಶೈಕ್ಷಣಿಕ ವಿಭಾಗ | |
|---|---|
| ವಿಷಯ ಸಂಖ್ಯೆ: | 06(a) (03/24) |

## –:ಟಿಪ್ಪಣಿ:–

ವಿಷಯ: **2023–24ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ ಎಂ.ಬಿ.ಎ. ಪ್ರಥಮ ವರ್ಷದ ಪದವಿಗೆ ಬಾಕಿ ಉಳಿದ ಸೀಟುಗಳ ಪ್ರವೇಶ ಶುಲ್ಕದ ಕುರಿತು.**

******

ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಆಡಳಿತ ನಿರ್ವಹಣಾಶಾಸ್ತ್ರ ಅಧ್ಯಯನ ವಿಭಾಗದ 2023–24ನೇ ಶೈಕ್ಷಣಿಕ ಸಾಲಿಗೆ PG CET ಮೂಲಕ ಭರ್ತಿಯಾಗದ ಬಾಕಿ ಉಳಿದಿರುವ ಪ್ರಥಮ ವರ್ಷದ ಸೀಟುಗಳಿಗೆ ಮಾನ್ಯ ಕುಲಪತಿಗಳ ಆದೇಶಾನುಸಾರ ಈ ಕೆಳಕಂಡಂತೆ ಶುಲ್ಕ ನಿಗದಿಪಡಿಸಿರುವುದನ್ನು ಸಿಂಡಿಕೇಟ್ ವಿಶೇಷ ಸಭೆಯ ಅವಗಾಹನೆಗೆ ಹಾಗೂ ಘಟನೋತ್ತರ ಅನುಮೋದನೆಗಾಗಿ ಸಲ್ಲಿಸಲಾಗಿದೆ.

**2023–24 ಶೈಕ್ಷಣಿಕ ಸಾಲಿನ ಪ್ರಥಮ ವರ್ಷದ ಶುಲ್ಕದ ವಿವರ:**

| SL. NO. | FEES DETAILS | (I Year MBA FEES) FOR UNFILLED PG CET SEATS | |
|---|---|---|---|
| | | SC/ST/C1 (Rs.) | Others (Rs.) |
| 1 | ADMISSION FEE | 13832 | 13832 |
| 2 | TUTION FEE | 46560 | 46560 |
| 4 | LIBRARY FEE | 880 | 880 |
| 5 | GYMKHANA FEE | 550 | 550 |
| 6 | COURSE DEVELOPMENT FEE | 1850 | 1850 |
| 7 | MEDICAL EXAMINATION FEE | 171 | 171 |
| 8 | REGISTRATION FEE | 2000 | 2000 |
| 9 | SPORTS FEE | 220 | 220 |
| 10 | STUDENT WELFARE FUND | 140 | 140 |
| 11 | TEACHER WELFARE FUND | 165 | 165 |
| 12 | READER ALLOWANCE | 303 | 303 |
| 13 | TRANSFER CERTIFICATE FEE | 715 | 715 |
| 14 | STUDY CERTIFICATE FEE | 50 | 50 |
| 15 | NSS FEE | 160 | 160 |
| 16 | ID CARD FEE | 55 | 55 |
| 17 | SPORTS DEVELOPMENT FEE | 242 | 242 |
| 18 | SOFT SKILLS DEVELOPMENT FEE | 1039 | 1039 |
| 19 | MEDICAL FEE | 200 | 200 |
| 20 | EDUCATION TECHNOLOGY | 990 | 990 |
| 21 | RED CROSS | 50 | 50 |
| 22 | UNIVERSITY PLACEMENT FEE | 250 | 250 |
| 23 | UNIVERSITY DEVELOPMENT FEE | 15000 | 15000 |
| | **TOTAL** | **85422** | **85422** |

## ನಿರ್ಣಯ

ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಆಡಳಿತ ನಿರ್ವಹಣಾಶಾಸ್ತ್ರ ಅಧ್ಯಯನ ವಿಭಾಗದ 2023–24ನೇ ಶೈಕ್ಷಣಿಕ ಸಾಲಿಗೆ PG CET ಮೂಲಕ ಭರ್ತಿಯಾಗದ ಬಾಕಿ ಉಳಿದಿರುವ ಪ್ರಥಮ ವರ್ಷದ ಸೀಟುಗಳಿಗೆ ಮೇಲ್ಕಂಡಂತೆ ಶುಲ್ಕ ನಿಗದಿಪಡಿಸಿರುವುದನ್ನು ಸಭೆಯು ಒಮ್ಮತದಿಂದ ಘಟನೋತ್ತರವಾಗಿ ಅನುಮೋದಿಸಿತು.

ಕೊನೆಯಲ್ಲಿ ಕುಲಸಚಿವರ ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಕುಲಸಚಿವರು

ಕುಲಪತಿಗಳು